ಅವನ ಹೆಸರು 'ಮಿಸ್ಟರ್ ಫರ್ಗೆಟ್',
ಅವನ ಹೆಸರು ಶ್... ಮುದ್ದುಮರಿಯೇ,
ನನ್ನ ಮುದ್ದುಮರಿ, ಬಂದ ಅವನು
ಶ್... ಶ್... ಕಪ್ಪು ಗುಮ್ಮ ಬಂದ
ಅಮ್ಮ...
ಶ್... ಸುಮ್ಮನಿರು, ಕಪ್ಪು ಗುಮ್ಮ ಬಂದ.

'ಕಪ್ಪು' ಎನ್ನುವುದು ಮೈಬಣ್ಣ ಮಾತ್ರ ಎನ್ನುವ ನಮ್ಮ ಆಲೋಚನಾಕ್ರಮಕ್ಕೆ ಪರ್ಯಾಯವಾಗಿ ಯಾಂಕರ್‌ಳ ಈ ಬಗೆಯು ಭೂಮಿಯೊಡಲ ಕತ್ತಲನ್ನು ಸೀಳಿ ಮೆಲ್ಲಗೆ ತಲೆಯೆತ್ತುವ ಹುಲ್ಲಿನೆಸಳಿನ ಸೋಜಿಗದಂಥದ್ದು. ಈಕೆಯ ಕವಿತೆಗಳಲ್ಲಿ 'ಕಪ್ಪು' ಪದಕ್ಕಿರುವ ಅಗಾಧ ಅರ್ಥಸಾಧ್ಯತೆಯೇ ಅದರ ಸೌಂದರ್ಯ. ಅದು ಬಣ್ಣದಾಚೆಗೆ ಮನಸ್ಸಿನ ಸ್ಥಿತಿಸೂಚಕವೂ ಆಗಿರುವುದರಿಂದಲೇ ಅದರ ಗಾಢತೆ ಹೆಚ್ಚು. ಬದುಕನ್ನು ಉತ್ಕಟವಾಗಿ ಪ್ರೀತಿಸಿದ ಮತ್ತು ಉತ್ಕಟ ಕವಿತೆಗಳನ್ನು ಬರೆದ ಇನ್‌ಗ್ರಿಡ್‌ಳ ಬರಹ, 'ಕಪ್ಪು'ಲೋಕದ ಬೆಳಕಿನೆಳೆಗಳು. ಇವಳ ಒಂದೊಂದು ಕವಿತೆಯೂ 'ಕಪ್ಪು' ಪ್ರಪಂಚದೆಡೆಗೆ ನಮ್ಮನ್ನು ಕರೆದೊಯ್ಯುವ ದೊಂದಿ. ಈಕೆಯ ಕವಿತೆಗಳು ಚೆಲ್ಲುವ ಬೆಳಕು ಹೆಣ್ಣುಬದುಕಿನ ಕತ್ತಲು, ಪುರುಷನೆದೆಯ ಕತ್ತಲು, ಜನಾಂಗೀಯಭೇದದ ಕತ್ತಲು, ಮನುಷ್ಯತ್ವದ ಮುಸುಕೆಳೆದುಕೊಂಡ ಅಸಹನೆಯ ಕತ್ತಲು ಮತ್ತು ನಮ್ಮ ಆತ್ಮವನ್ನಾವರಿಸಿದ ಭ್ರಮೆಯ ಕತ್ತಲನ್ನು ಏಕಕಾಲಕ್ಕೆ ಸೀಳುವಂತಹದ್ದು.

ಇನ್‌ಗ್ರಿಡ್ ಯಾಂಕರ್ (1933–1965) ಹುಟ್ಟಿದ್ದು ದಕ್ಷಿಣ ಆಫ್ರಿಕಾದ ಡೌಗ್ಲಾಸ್ ಊರಿನ ತೋಟದ ಮನೆಯಲ್ಲಿ. ಸ್ವತಃ ಲೇಖಕ, ಸಂಪಾದಕನಾಗಿದ್ದ ಅಬ್ರಹಾಮ್ ಯಾಂಕರ್ ಈಕೆಯ ತಂದೆ. ಹೊಟ್ಟೆಯಲ್ಲಿರುವ ಮಗು(ಇನ್‌ಗ್ರಿಡ್) ತನ್ನದಲ್ಲ ಎಂದ ಗಂಡನ ಆಪಾದನೆಯನ್ನು ಸಹಿಸಲಾಗದೆ, ಇನ್‌ಗ್ರಿಡ್‌ಳ ತಾಯಿ ಬಿಯಾಟ್ರಿಸ್ ಗರ್ಭಿಣಿಯಾಗಿದ್ದಾಗಲೇ ಗಂಡನ ಮನೆಬಿಟ್ಟು ಹೊರಟು ಬಂದಳು. ಗಂಡನಿಂದ ಬೇರೆಯಾಗಿ ಇನ್‌ಗ್ರಿಡ್ ಮತ್ತು ಅವಳ ಅಕ್ಕ ಅನ್ನಾಳನ್ನು ಒಂಟಿಯಾಗಿ ಸಲಹಿದ ಬಿಯಾಟ್ರಿಸ್, ಇನ್‌ಗ್ರಿಡ್ ಹತ್ತು ವರ್ಷದವಳಿದ್ದಾಗ ಮಾನಸಿಕ ಖಿನ್ನತೆಗೊಳಗಾಗಿ ಆಸ್ಪತ್ರೆ ಸೇರಿದಳು. ತೀವ್ರ ಮಾನಸಿಕ ತೊಳಲಾಟ ಮತ್ತು ಕ್ಯಾನ್ಸರ್ ಅವಳ ಪ್ರಾಣವನ್ನು ಕಸಿದುಕೊಂಡ ನಂತರ, 'ಕಡಲ ದಂಡೆಯಲ್ಲಿ ಪುಟ್ಟ ನೀರುನಾಯಿಗಳಂತೆ ಆಟವಾಡುತ್ತ, ಪುಸ್ತಕಗಳ ಭ್ರಾಮಕ ಲೋಕದಲ್ಲಿ ಹುದುಗಿ ಹೋಗುತ್ತ ಅಥವಾ ಪೈನ್ ಮರಗಳ ಕಾಡಿನಲ್ಲಿ ಗುಟ್ಟುಗಳನ್ನು ಬಚ್ಚಿಡುತ್ತ, ಬಚ್ಚಿಟ್ಟ ಗುಟ್ಟುಗಳನ್ನು ಹುಡುಕುತ್ತ ಗಂಟೆಗಟ್ಟಲೆ ಕಳೆಯುತ್ತಿದ್ದ ಇನ್‌ಗ್ರಿಡ್ ಮತ್ತು ಅನ್ನಾ ವಸತಿ ಶಾಲೆಯಲ್ಲಿ ದಿನಗಳನ್ನು ಕಳೆಯಬೇಕಾಯಿತು. ಆನಂತರ ತಂದೆಯ ಬಲವಂತಕ್ಕೆ ಕಟ್ಟುಬಿದ್ದು ಮನೆಗೆ ಬಂದರೂ ಅವನ ಮೂರನೆ ಹೆಂಡತಿ ಮತ್ತು ಅವರಿಬ್ಬರ ಮಕ್ಕಳ ಒರಟು ನಡತೆಯು ಇನ್‌ಗ್ರಿಡ್ ಮತ್ತು ಅಬ್ರಹಾಮ್ ನಡುವಿನ ಬಿರುಕನ್ನು ಕಾಯಂಗೊಳಿಸಿತು.

ಯಾಂಕರ್ 'ಆಫ್ರಿಕಾನರ್' ಆಗಿದ್ದವಳು, ಅಂದರೆ ಆಫ್ರಿಕಾನ್ಸ್ ಭಾಷೆ ಮಾತನಾಡುವ ಬಿಳಿಯಳು. ಈ ಜನಾಂಗದವರು ಡಚ್ ಮೂಲದವರು, ಸಂಪೂರ್ಣವಾಗಿ ಆಫ್ರಿಕನ್ ನೆಲೆಗಳನ್ನು ಪಡೆದುಕೊಂಡವರು, ಹಾಗಾಗಿಯೇ ಇವರನ್ನು 'ಆಫ್ರಿಕನ್'ರು ಎಂದೂ ಗುರುತಿಸುತ್ತಾರೆ. ಶಾಲೆಯ ಶಿಕ್ಷಕಿಯೊಬ್ಬರ ಪ್ರೋತ್ಸಾಹದಿಂದ ಆರು ವರ್ಷದವಳಿದ್ದಾಗಲೇ ಕವಿತೆಗಳನ್ನು ಬರೆಯಲು ಆರಂಭಿಸಿದ ಇನ್‌ಗ್ರಿಡ್ ಹದಿಹರೆಯದ ಹೊತ್ತಿಗೆ ಕವಿತಾಸಂಕಲನ ಪ್ರಕಟಿಸುವಷ್ಟು